

ಡಾ.ವಿನೋದ ಛೆಬ್ಬಿ

**ಬಾಲ್ಯದಲ್ಲಿ ಲೈಂಗಿಕ ದುರ್ಬಳಕೆಗೆ ಒಳಗಾದವರು ಬೆಳೆದಮೇಲೆ ಸಲಿಂಗಕಾಮಿ ಆಗುವ ಸಂಭವ ಎಷ್ಟಿದೆ?**

# 113: ಸಲಿಂಗಿಯ ದಾಂಪತ್ಯ-1

ಇವನನ್ನು ಸಹೋದ್ಯೋಗಿ ಲೈಂಗಿಕ ತಜ್ಞರೊಬ್ಬರು ನನ್ನಲ್ಲಿ ಕಳಿಸಿದ್ದಾರೆ. ಇಪ್ಪತ್ತೊಂಬತ್ತು ವರ್ಷದ ಗಂಡಸು. ಎರಡು ವರ್ಷಗಳಿಂದ ವಿವಾಹಿತ. ಆರು ತಿಂಗಳ ಮಗುವೂ ಇದೆ. ಇವನ ಸಮಸ್ಯೆ ಏನೆಂದರೆ, ಹೆಂಡತಿಯ ಜೊತೆಗೆ ಕಾಮಾಸಕ್ತಿ ಎಳ್ಳಷ್ಟೂ ಇಲ್ಲ. ಇದನ್ನು ಹೇಗೆ ಸರಿಪಡಿಸಿಕೊಳ್ಳಬೇಕೆಂದು ತಿಳಿಯದೆ ಕಂಗಾಲಾಗಿ ಬಂದಿದ್ದಾನೆ.

ಎದುರಿಗಿದ್ದ ಅವನನ್ನೇ ಗಮನಿಸಿದೆ. ಕುರ್ಚಿಯ ಮೇಲೆ ಕುಳಿತವನು ಚಡಪಡಿಸುತ್ತಿದ್ದ. ಗಾಬರಿಯು ಶರೀರವೆಲ್ಲ ವ್ಯಾಪಿಸಿತ್ತು. ಚಾಚಿದ ಕೈ ನಡುಗುತ್ತಿತ್ತು. ನಾಲಿಗೆ ತೊದಲುತ್ತಿತ್ತು. ಪದಗಳನ್ನು ಸ್ಪಷ್ಟವಾಗಿ ಉಚ್ಚರಿಸಲೂ ಆಗುತ್ತಿರಲಿಲ್ಲ. ಅವನು ಹೇಳುವುದನ್ನು ಪ್ರಯಾಸಪಟ್ಟು ಅರ್ಥಮಾಡಿಕೊಂಡೆ. ಹೆಂಡತಿ ಬಾಣಂತನ ಮುಗಿಸಿಕೊಂಡು ಬಂದಿದ್ದಾಳೆ. ಇವನನ್ನು ಕೂಡಲು ಕಾಯುತ್ತಿದ್ದಾಳೆ. ಇವನಿಗಾದರೋ ಅವಳ ಮೇಲೆ ಮನಸ್ಸೇ ಬರುತ್ತಿಲ್ಲ. ಮನಸ್ಸು ಬರುತ್ತಿಲ್ಲ ಎನ್ನುವುದಕ್ಕಿಂತಲೂ ಅವಳಿಂದ ಪಾರಾಗಬೇಕೆಂಬ ಒತ್ತಾಸೆ. ಹಾಗಿದ್ದರೂ ಆಕೆಯ ಒತ್ತಾಯಕ್ಕೆ ಮಣಿಯಲೇಬೇಕಾದ ಪ್ರಸಂಗ ಬಂದಿದೆ. ಪರಿಣಾಮವಾಗಿ ಭಯಭೀತಿಗಳು ಮುತ್ತಿವೆ.

ನಾನು ಕುತೂಹಲದಿಂದ ಪ್ರಶ್ನಿಸಿದೆ. ಕಾಮದಲ್ಲಿ ಆಸಕ್ತಿ ಇಲ್ಲವಾದರೆ ಹಾಗೆಂದು ಬಾಯಿಬಿಟ್ಟು ಹೇಳಬಹುದಲ್ಲವೆ? ಯಾಕೆಂದರೆ ಗಂಡಸರಿಗೆ ಹೆಂಡತಿಯು ಬಯಸಿದಾಗಲೆಲ್ಲ ಕಾಮಾಸಕ್ತಿ ಹುಟ್ಟಲೇಬೇಕೆಂದಿಲ್ಲ – ತಮ್ಮ ಗಂಡಸರು ಬಯಸಿದಾಗ ಕೆಲವೊಮ್ಮೆ ಹೆಂಗಸರು ಬೇಡವೆನ್ನುತ್ತಾರಲ್ಲ, ಹಾಗೆ ಅವನೂ ಈಗಾಗುವುದಿಲ್ಲ, ಆಮೇಲೆ ನೋಡೋಣ ಎಂದು ಇನ್ನೊಂದು ಕಡೆ ಮುಖ ತಿರುಗಿಸಿ ಮಲಗಿದರಾಯಿತು. ಅದುಬಿಟ್ಟು ಗಾಬರಿಯಾಗುವಂಥ, ಓಡಿಹೋಗುವಂಥ ಕಾರಣ ಏನಿದೆ? ಅವನು ಕಾರಣ ಹೇಳಿದ. ಅವನು ಹೇಳಿದ್ದು ಕೇಳಿ ನನಗೆ ಗೊಂದಲವಾಯಿತು.

ಅವನೊಬ್ಬ ಸಲಿಂಗಕಾಮಿ.



ನನಗೆ ಗೊಂದಲವಾಗಿದ್ದು ಅವನು ಸಲಿಂಗಕಾಮಿ ಎಂದಲ್ಲ, ಅವನು ಸಲಿಂಗಕಾಮಿಯಾಗಿಯೂ ಒಂದು ಹೆಣ್ಣನ್ನು ಮದುವೆ ಆಗಿದ್ದಕ್ಕೆ!

ಇಲ್ಲಿ ಸಲಿಂಗಕಾಮದ ಬಗೆಗೆ ಸ್ವಲ್ಪ ಹೇಳಲೇಬೇಕು. ಸಲಿಂಗಕಾಮ (homosexuality) ಎಂದರೆ ಗಂಡು ಗಂಡನ್ನು, ಹೆಣ್ಣು ಹೆಣ್ಣನ್ನು ಕಾಮಿಸುವುದು. ಇದು, ಸಾರ್ವತ್ರಿಕವಾಗಿ ಇರುವಂತೆ ಹೆಣ್ಣು-ಗಂಡು ಪರಸ್ಪರ ಕಾಮಿಸುವುದಕ್ಕಿಂತ ಭಿನ್ನವಾದುದು. ಹಾಗಿದ್ದರೂ ಇದೊಂದು ಅತಿ ಸಹಜವಾದ ಸ್ಥಿತಿಯಷ್ಟೆ – ಹೆಚ್ಚಿನವರು ಬಲಗೈ ಉಪಯೋಗಿಸುವಾಗ ಕೆಲವರು ಎಡಗೈ ಉಪಯೋಗಿಸುವಷ್ಟೇ ಸಹಜವಾದುದು. ಇದರಲ್ಲಿ ಕಾಯಿಲೆಯಾಗಲೀ ವಿಕೃತಿಯಾಗಲೀ ಎಂಥದ್ದೂ ಇಲ್ಲ. ಸಲಿಂಗಕಾಮಿಗಳಿಗೆ ತಮ್ಮದೇ ಲಿಂಗಿಗಳ ಹೊರತಾಗಿ ಇತರರ ಮೇಲೆ ಆಸಕ್ತಿ ಇರುವುದಿಲ್ಲ. ಹಾಗಿದ್ದರೂ ಮದುವೆಯಾಗಿಬಿಟ್ಟಿದ್ದಾನೆ. ಭಯದ ಕಾರಣ ಸ್ಪಷ್ಟವಾಯಿತು!

ಅದು ಸರಿ, ಇವನು – ಇವನನ್ನು ಸಲಿಂಗಿ ಎಂದು ಕರೆಯೋಣ – ಸಲಿಂಗಕಾಮಿಯಾದರೂ ಹೆಣ್ಣಿನ ಮೇಲೆ ಮನಸ್ಸು ಬರದಿದ್ದರೂ ಮದುವೆ ಆಗಲು ಯಾಕಾದರೂ ಹೋದ? ಕಾರಣ ಮನೆಯವರ ಒತ್ತಾಯವಂತೆ. ಸಂಪ್ರದಾಯಸ್ಥ ರೈತ ಕುಟುಂಬ. ಒಬ್ಬನೇ ಮಗ. ವಯಸ್ಸಿಗೆ ಬಂದಿದ್ದಾನೆ, ಓದು ಮುಗಿಸಿ, ಕೆಲಸಕ್ಕೆ ಸೇರಿ ಸಾಕಷ್ಟು ಗಳಿಸುತ್ತಿದ್ದಾನೆ. ಮದುವೆ ಆಗಲು ಒತ್ತಾಯ ಇಲ್ಲದಿದ್ದೀತೆ? ಬೇಡವೆನ್ನುತ್ತ ಸುಮಾರು ಕಾಲ ತಳ್ಳಿದವನು ಅಪ್ಪಅಮ್ಮ ಸಾಯುವ ಬೆದರಿಕೆ ಒಡ್ಡಿದಾಗ ಮಣಿದು ಮದುವೆಯಾಗಿದ್ದಾನೆ!

ನಾನು ಕೇಳಿದೆ: ಇವನು ಮದುವೆ ಬೇಡವೆನ್ನುವಾಗ ಕಾರಣ ಕೇಳಿದ್ದಕ್ಕೆ ತಾನು ಸಲಿಂಗಕಾಮಿ ಎಂದು ಪ್ರಕಟವಾಗಿ ಹೇಳಬಹುದಿತ್ತಲ್ಲವೆ? ಅವನ ವಿವರಣೆ ನೇರವಾಗಿತ್ತು: ಇವನ ಹಲವು ಸಲಿಂಗಿ ಸಂಗಾತಿಗಳು ತಮ್ಮ ಹೆಂಡಂದಿರೊಡನೆಯೂ ಸುಖಿಸುತ್ತಾರಂತೆ. ಹಾಗೆ ತನಗೂ ಸಾಧ್ಯವಾದೀತು ಎಂಬ ನಂಬಿಕೆಯಿಂದ ಮದುವೆಗೆ ಒಪ್ಪಿದ್ದಾನೆ.

ಗಂಡು ಸಲಿಂಗಕಾಮಿಗಳು ಹೆಣ್ಣಿನೊಡನೆ ಸುಖಿಸುವುದು ಎಂದರೆ ಹೇಗೆ? ಇದು ಸಲಿಂಗಕಾಮದ ವ್ಯಾಖ್ಯೆಗೆ ವ್ಯತಿರಿಕ್ತವಾಗುತ್ತದಲ್ಲವೆ? ಇಲ್ಲಿ ವಿವರಣೆಯ ಅಗತ್ಯವಿದೆ. ಕೆಲವರು ಹೆಣ್ಣು, ಗಂಡು ಇಬ್ಬರನ್ನೂ ಕಾಮಿಸುವ ಒಲವು ಹೊಂದಿರುತ್ತಾರೆ. ಇದಕ್ಕೆ ಉಭಯಲಿಂಗಿ ಅಥವಾ ದ್ವಿಲಿಂಗಿ (bisexual) ಎನ್ನುತ್ತಾರೆ. ದ್ವಿಲಿಂಗಿಗಳು ಇವನ ಜೊತೆಗೆ ಸುಖಿಸುವಾಗ ಇವನು ತಾನೂ ದ್ವಿಲಿಂಗಿಯಾಗಿ ಹೆಣ್ಣಿನೊಡನೆ ಸುಖಿಸಲು ಸಾಧ್ಯವಿದೆ ಎಂದುಕೊಂಡು ಮದುವೆಯಾಗಿದ್ದಾನೆ!

ಸಲಿಂಗಿಯು ಇದನ್ನು ಹೇಳುತ್ತಿರುವಾಗ ಇನ್ನೊಂದು ವಿಷಯ ನೆನಪಿಗೆ ಬಂತು. ಇವನಿಗೊಂದು ಮಗುವಿದೆ. ಇದು ಹೇಗೆ ಸಾಧ್ಯವಾಯಿತು? ಹೆಂಡತಿಯ ಮೇಲೆ ಕಾಮದಾಸೆ ಹುಟ್ಟಿದ್ದರಿಂದ ತಾನೆ? ಹಾಗಲ್ಲ. ಮದುವೆಯಾದ ಹೊಸದರಲ್ಲಿ ಅವಳ ಜೊತೆಗೆ ಮಲಗಿ 'ಪ್ರಯೋಗ ಮಾಡಿದಾಗ' ಕಾಮದಾಸೆ ಯಾವೊತ್ತೂ ಒಂಚೂರೂ ಬರಲಿಲ್ಲವಂತೆ. ಸಂಭೋಗಕ್ಕೆಂದು ಒತ್ತಾಯ ಬಂದಾಗ ಇವನಿಗೆ ಹೆಂಡತಿಯ ಎದುರು ಬಟ್ಟೆ ತೆಗೆಯುವುದೂ ಅಸಹ್ಯ ಎಂದು ಅನ್ನಿಸಿದೆ. ಆಗ ಇವನೇನು ಮಾಡಿದ? ತನ್ನ ಗಂಡು ಸಂಗಾತಿಗಳನ್ನು ಕಲ್ಪಿಸಿಕೊಳ್ಳುತ್ತ ಬಿಗಿಯಾಗಿ ಕಣ್ಣುಮುಚ್ಚಿ ಅವಳೊಡನೆ ಸಂಭೋಗ ಮಾಡಿದ. ಇವನ ಅದೃಷ್ಟ, ಎರಡು ಸಲ ಕೂಡುವಷ್ಟರಲ್ಲಿ ಆಕೆ ಗರ್ಭಿಣಿಯಾದಳು. ಇವನು ಬದುಕಿಕೊಂಡ! ಆದರೆ ಈಗ ಹೆಂಡತಿ ಬಾಣಂತನ ಮುಗಿಸಿಕೊಂಡು ಮರಳಿದ್ದಾಳೆ. ಇಬ್ಬರೂ ಮತ್ತೆ ಸಂಸಾರ ಶುರುಮಾಡಿದ್ದಾರೆ. ಆಕೆಯೀಗ ಕಾಪರ್ –ಟಿ ಧರಿಸಿರುವುದರಿಂದ ಇನ್ನೊಂದು ಗರ್ಭಧಾರಣೆಯ ಆತಂಕವಿಲ್ಲ. ಹಾಗಾಗಿ ಕಾಮಸುಖಕ್ಕೆ ಕಾತರದಿಂದ ಕಾಯುತ್ತಿದ್ದಾಳೆ. ಸಲಿಂಗಿಯೋ ಮುಂಚಿನಂತೆ ಗಂಡಸರನ್ನು ತಲೆಯಲ್ಲಿ ತುಂಬಿಕೊಂಡು ಹೆಂಡತಿಯೊಡನೆ ಕೂಡಲು ಪ್ರಯತ್ನಿಸಿದ್ದಾನೆ. ಆಗಿಲ್ಲ. ದೂರ ಸರಿದಿದ್ದಾನೆ. ಆಕೆ ಗಾಬರಿಯಾಗಿ ಕಾರಣ ಕೇಳಿದಾಗ ಏನನ್ನೂ ಹೇಳಲಾಗದೆ ಗಾಬರಿಯಾಗಿ ಸಹಾಯಕ್ಕಾಗಿ ಧಾವಿಸಿದ್ದಾನೆ.

ಅಂತೂ ಸಲಿಂಗಿಯ ಕಲ್ಪನೆಯ ತುಂಬ ಸಲಿಂಗಿಗಳೇ ತುಂಬಿದ್ದಾರೆ ಎಂದಾಯಿತು. ತಾನು ಸಲಿಂಗಕಾಮಿ ಎನ್ನುವ ಅರಿವು ಯಾವಾಗ ಅವನಿಗೆ ಮೂಡಿತು? ಸಲಿಂಗಿಯು ತನ್ನ ಬಾಲ್ಯದಲ್ಲಿ ನಡೆದ ವಿಷಯವನ್ನು ನೆನಪು ಮಾಡಿಕೊಂಡ. ಒಂಬತ್ತರ ವಯಸ್ಸಿನಲ್ಲಿ ಇರಬೇಕಾದರೆ ಪರಿಚಿತ ಮಧ್ಯವಯಸ್ಕನೊಬ್ಬನು ತನ್ನ ಲೈಂಗಿಕ ಬಯಕೆಗಳಿಗೆ ಇವನನ್ನು ಹಲವು ಬಾರಿ ಬಳಸಿಕೊಂಡನಂತೆ. ಆಗಿನಿಂದ ಈ ಅಭ್ಯಾಸ ಅಂಟಿಕೊಂಡಿತು ಎಂದು ಹೇಳಿದ. ಆಗಿನಿಂದ ಮಧ್ಯವಯಸ್ಕ ಗಂಡಸರು ಎಂದರೆ ಕಾಮದಾಸೆ ಕೆರಳುತ್ತದೆ. ಸಾಕಷ್ಟು ಜನ ಮಧ್ಯವಯಸ್ಕರೊಡನೆ ಸುಖ ಅನುಭವಿಸಿದ್ದಾನೆ.

ಸಲಿಂಗಿಯು ಹೇಳಿದ್ದನ್ನೆಲ್ಲ ಗಮನ ಕೊಟ್ಟು ಆಲಿಸಿ, ನಂತರ ಕೇಳಿದೆ: 'ಇದರಿಂದ ನಿಮ್ಮ ಬಗೆಗೆ ನಿಮಗೆ ಏನು ಗೊತ್ತಾಗುತ್ತದೆ?' ಆಗ ಅವನು ಹೇಳಿದ್ದು ವಿಚಿತ್ರವಾಗಿತ್ತು. 'ಒಂದುವೇಳೆ ಆ ಮಧ್ಯವಯಸ್ಕ ನನ್ನ ಬದುಕಿನಲ್ಲಿ ಬರದೇ ಹೋಗಿದ್ದರೆ ನಾನೂ ಎಲ್ಲರಂತೆ ಹೆಣ್ಣಿನೊಡನೆ ಕೂಡುತ್ತ ಸುಖವಾಗಿರುತ್ತಿದ್ದೆ. ಸಲಿಂಗಕಾಮದ ದುಶ್ಚಟ ಅಂಟಿಕೊಳ್ಳುತ್ತಲೇ ಇರಲಿಲ್ಲ!'

ಸಲಿಂಗಕಾಮ ಒಂದು ಚಟವೆ? ಇದನ್ನು ಮುಂದಿನ ಸಲ ನೋಡೋಣ.

**ಉಚಿತ ಸಹಾಯವಾಣಿಗೆ ಮಂಗಳವಾರ ಹಾಗೂ ಶುಕ್ರವಾರ ಕರೆಮಾಡಿ. ಲೈಂಗಿಕ ಸಮಸ್ಯೆಗಳಿಗೆ: 8050255229 (3ರಿಂದ 5ರ ತನಕ); ದಾಂಪತ್ಯ ಸಮಸ್ಯೆಗಳಿಗೆ: 8494944888 (11ರಿಂದ ಸಂಜೆ 5ರ ತನಕ). ದಾಂಪತ್ಯ ಸಮಸ್ಯೆಗಳ ಪರಿಹಾರಕ್ಕೆ 'ಸುಧಾ'ಕ್ಕೆ ಪತ್ರ ಬರೆಯಬಹುದು.**